ದಿನಾಂಕ 24.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನವನ್ನು ಭೋಧಿಸಲಾಯಿತು.

ಪಾಟೀ ಸವಾಲು : ಶ್ರೀ ವೈ.ಎನ್.ಆರ್ ವಕೀಲರಿಂದ 2 ನೇ ಎದುರುದಾರರ ಪರವಾಗಿ

1. ನನಗೆ ದಿನಾಂಕ 07.06.2021 ರಂದು ಕುಂದನಹಳ್ಳಿ ಗೇಟ್ ಬಳಿ ಅಪಘಾತ ಆಗಿರುತ್ತದೆ. ತುಳಸಿ ಗ್ರಾಮದ ಯೋಗೇಶ್ ಎಂಬುವವರಿಗೆ ಸೇರಿದ ಬೈಕ್ ನಂ. ಕೆಎ.54-ಕೆ-6490 ನ್ನು ಆ ದಿನ ನಾನು ತೆಗೆದುಕೊಂಡು ಹೋಗಿದ್ದೆ. ನಾನು ಹೋಗುತ್ತಿದ್ದ ಬೈಕಿಗೆ ಕೆಎ.54-ಕೆ-4319 ಪಲ್ಸರ್ ಬೈಕ್ ಹಿಂದಿನಿಂದ ಬಂದು ಢಿಕ್ಕಿ ಪಡಿಸಿರುತ್ತದೆ. ನಾನು ನನ್ನ ಬೈಕನ್ನು ಆ ದಿನ ನಿಧಾನವಾಗಿ ಚಲಾಯಿಸುತ್ತಿದ್ದೆ. ನನಗೆ ಢಿಕ್ಕಿ ಪಡಿಸಿದ ಬೈಕ್ ತುಳಸಿ ಗ್ರಾಮದವರಾದ 1 ನೇ ಎದುರುದಾರರಿಗೆ ಸೇರಿದ್ದು ಎಂದರೆ ಸರಿ. 1 ನೇ ಎದುರುದಾರರು ಮತ್ತು ನನಗೆ ಬೈಕ್ ನೀಡಿದ್ದ ಯೋಗೇಶ್ ರವರು ಪರಸ್ಪರ ಚಿರಪರಿಚಿತರು ಎಂದರೆ ಸರಿಯಲ್ಲ. ಹಿಂಭಾಗದಿಂದ ಬರುತ್ತಿದ್ದ ಬೈಕ್ ನಿಧಾನವಾಗಿ ಬರುತ್ತಿತ್ತು ಎಂದರೆ ಸರಿಯಲ್ಲ. ನನಗೆ ಡಿಕ್ಕಿ ಪಡಿಸಿದ ಬೈಕ್ ಸವಾರ ಮತ್ತು ಬೈಕ್ ಕೆಳಕ್ಕೆ ಬಿದ್ದಿರುತ್ತಾರೆ. ಅಪಘಾತದಲ್ಲಿ ಎರಡು ಬೈಕ್ ಗಳು ಜಖಂ ಆಗಿರುತ್ತವೆ ಎಂದರೆ ಸರಿ. ನಾನೇ ಖುದ್ದು ಸ್ವತಃ ವೇಗವಾಗಿ ಚಲಾಯಿಸಿ ಅಪಘಾತ ಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಹಿಂಭಾಗದಿಂದ ಬೈಕ್ ನಂ. ಕೆಎ.54-ಕೆ-4319 ಅಪಘಾತ ಪಡಿಸಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದ ನಿಪಿ5 ರಲ್ಲಿ ಸದರಿ ಬೈಕಿಗೆ ಯಾವುದೇ ಜಖಂ ಆಗಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನಾನು ಚಾಲನೆ ಮಾಡುತ್ತಿದ್ದ ಬೈಕಿನ ಮಾಲೀಕರಿಬ್ಬರು ಸೇರಿ ಪರಿಹಾರ ಪಡೆಯಲು ವಾಹನವನ್ನು ಸೃಷ್ಟಿ ಮಾಡಿ ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

2. ನನ್ನ ಬೈಕಿನ ಮಾಲೀಕರು 6 ದಿನಗಳು ತಡವಾಗಿ ದೂರು ನೀಡಿರುತ್ತಾರೆ ಎಂದರೆ ಸಾಕ್ಷಿಯು 4 ದಿನಗಳ ನಂತರ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಮತ್ತೊಂದು ವಾಹನವನ್ನು ಸೃಷ್ಟಿ ಮಾಡಲು ದೂರನ್ನು

ಯೋಗೇಶ್ ರವರು ತಡವಾಗಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಅಪಘಾತ ಮಾಡಿದ್ದಾರೆ ಎಂದು ಹೇಳಿದ್ದ ಬೈಕ್ ಸವಾರ ಹಾಗೂ ನನ್ನ ಬೈಕಿನ ಮಾಲೀಕರು ಹಾಗೂ ನಾವುಗಳು ಪರಿಹಾರ ಪಡೆಯಲು ಪರಸ್ಪರ ಶಾಮೀಲಾಗಿ ಕ್ರಿಮಿನಲ್ ಪ್ರಕರಣದಲ್ಲಿ ತಪ್ಪೊಪ್ಪಿಗೆ ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ.

3. ಅಪಘಾತ ಆದ ಕೂಡಲೇ ನನ್ನನ್ನು ಚನ್ನರಾಯಪಟ್ಟಣದ ಗ್ರಾಸ್ ಲೈಫ್ ಆಸ್ಪತ್ರೆಗೆ ಸೇರಿಸಿರುತ್ತಾರೆ. ನನಗೆ ಅಪಘಾತದಲ್ಲಿ ಎಡ ಮುಂಗೈ ಮುರಿದಿರುತ್ತದೆ. ನಾನು ಎರಡು ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ನನಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ಒಳರೋಗಿಯಾಗಿ ದಾಖಲಾಗುವ ಸಂಭವ ಇರಲಿಲ್ಲ ಎಂದರೆ ಸರಿಯಲ್ಲ.

4. ನನಗೆ ಬಿ.ಪಿ.ಎಲ್ ಪಡಿತರ ಚೀಟಿ ಇದೆ ಎಂದರೆ ಸರಿ. ನನಗೆ ತಿಂಗಳಿಗೆ ರೂ.25,000/- ಆದಾಯ ಇತ್ತು ಎಂದು ತೋರಿಸುವ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಹಾಗೂ ರೂ.25,000/- ಗಳನ್ನು ತಿಂಗಳಿಗೆ ಸಂಪಾದನೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಈಗಲೂ ಸಹ ನಾನು ಅಪಘಾತ ಪೂರ್ವದಲ್ಲಿ ಕೆಲಸ ಮಾಡುತ್ತಿದ್ದ ರೀತಿಯೇ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಮುರಿದಿದ್ದ ಕೈ ಈಗ ಗುಣಮುಖ ಆಗಿದೆ ಎಂದರೆ ಸರಿ. ನನಗೆ ಸಂದೀಪ್ ಎನ್ನುವ ವೈದ್ಯರು ಚಿಕಿತ್ಸೆ ನೀಡಿರುತ್ತಾರೆ. ನಾನು ಕಳೆದ 2 ತಿಂಗಳ ಹಿಂದೆ ಆಸ್ಪತ್ರೆಗೆ ಹೋಗಿದ್ದೆ. ಈ ಬಗ್ಗೆ ದಾಖಲೆ ಹಾಜರುಪಡಿಸಿರುವುದಿಲ್ಲ. ನಾನು ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಮತ್ತೆ ಆಸ್ಪತ್ರೆಗೆ ಹೋಗದೇ ಇರುವ ಕಾರಣ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

5. ನನಗೆ ದ್ವಿ ಚಕ್ರ ವಾಹನ ಚಾಲನೆ ಮಾಡುವ ಅನುಭವ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಬಳಿ ಚಾಲನಾ ಪರವಾನಿಗೆ ಇದೆ ಎಂದು ನುಡಿಯುತ್ತಾರೆ. ಚಾಲನಾ ಪರವಾನಿಗೆಯನ್ನು

ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನಗೆ ಚಾಲನಾ ಪರವಾನಿಗೆ ಇಲ್ಲದೇ ಇರುವ ಕಾರಣ ಅದನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನೇ ಸ್ವತಃ ಬಿದ್ದು ಅಪಘಾತ ಮಾಡಿಕೊಂಡಿದ್ದು, ಯಾವುದೇ ಬೈಕ್ ಡಿಕ್ಕಿ ಪಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ಮತ್ತೆ ಯಾವುದೇ ರೀತಿಯ ಶಸ್ತ್ರ ಚಿಕಿತ್ಸೆ ಅವಶ್ಯಕತೆ ಇಲ್ಲ, ಹೆಚ್ಚಿಗೆ ಪರಿಹಾರ ಪಡೆಯಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನ ಎಂದರೆ ಸರಿಯಲ್ಲ. ಪೊಲೀಸರ ಜೊತೆ ಶಾಮೀಲಾಗಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಮೆಡಿಕಲ್ ಬಿಲ್ಲುಗಳು ಸಹ ಸೃಷ್ಟಿತಾ ದಾಖಲೆಗಳು ಎಂದರೆ ಸರಿಯಲ್ಲ. ನನಗೆ ಯಾವುದೇ ತೊಂದರೆ ಇಲ್ಲದೇ ಇದ್ದರೂ ಸಹ ಹೆಚ್ಚಿಗೆ ಪರಿಹಾರ ಪಡೆಯಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

**ತೆ ನ್ಯಾ ನ ಉ ಮೇ ಬೆ ಮಾಡಿಸಲಾಯಿತು.**

ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್.)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.